ಬರವಣಿಗೆಯ ಆಸಕ್ತಿ ಹೊಂದಿದ್ದರೂ ಮಕ್ಕಳ ಸಾಹಿತ್ಯವೇ ಪದೇ ಪದೇ ತಂತಾನೇ ಮುನ್ನೆಲೆಗೆ ಬರುತ್ತಿರುತ್ತದೆ. ಮಕ್ಕಳೊಂದಿಗೆ ಬೆರೆಯುವುದು, ಬರೆಯುವುದು ಆ ಕ್ರಿಯೆಯನ್ನು ನನ್ನೊಂದಿಗೆ ಅಡ್ಜೆಕ್ಟಿವ್ ಆಗಿ ಸೇರಿಸಿಕೊಳ್ಳಲು ಹೆಮ್ಮೆ ಎನಿಸುತ್ತದೆ.

**2**

ಮಕ್ಕಳ ಬೆಳವಣಿಗೆಗಾಗಿ, ಅವರ ಮಾರ್ಗದರ್ಶನಕ್ಕಾಗಿ ಶಿಕ್ಷಣ ನೀಡುವುದಕ್ಕಾಗಿ ಒಂದಿಷ್ಟು ಸಾಹಿತ್ಯ ಸೃಷ್ಟಿ ಮಾಡುವುದು ಮೊದಲಿನಿಂದಲೂ ಪರಂಪರೆಯಾಗಿ ನಡೆದುಕೊಂಡು ಬಂದಿದೆ, ಅದು ಈಗಲೂ ಇದೆ. ನನ್ನದು ಆ ಥರದ್ದಲ್ಲ. ನನ್ನ ಬರವಣಿಗೆ ತೀರಾ ಸಹಜವಾದದ್ದು ಮತ್ತು ನನ್ನ ಬದುಕಿನ ಸಹಜವಾದ ಅಭಿವ್ಯಕ್ತಿಯಾಗಿ ನನ್ನ ಬರವಣಿಗೆ ಹೊಮ್ಮುತ್ತಿರುತ್ತದೆ. ಆ ಅಭಿವ್ಯಕ್ತಿ ಹೆಚ್ಚಾಗಿ ನನ್ನ ಬಾಲ್ಯದ ಕುರಿತೇ ಇರುತ್ತದೆ. ಹಾಗಾಗಿ ಅದು ಮಕ್ಕಳಿಗೆ ಹಿಡಿಸಿ ಮಕ್ಕಳ ಸಾಹಿತ್ಯ ಆಗಿದೆಯಷ್ಟೆ. ಇದಲ್ಲದೆ ಬೇರೆ ಯಾವ ಕಾರಣವೂ ನನ್ನ ಮುಂದಿಲ್ಲ.

**3**

ಕಥೆ–ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ, ಮಕ್ಕಳು ಓದುತ್ತಿಲ್ಲ ಅನ್ನಿಸುತ್ತಿಲ್ಲ. ಎಲ್ಲ ತಲೆಮಾರಿನ ಮಕ್ಕಳನ್ನೂ ಒಂದಲ್ಲಾ ಒಂದು ಬಗೆಯಲ್ಲಿ ಕಥಾಪರಂಪರೆ ಅವರನ್ನು ಮುಟ್ಟಿರುತ್ತದೆ. ಆದರೆ ನಾವು ಓದಬೇಕು, ಓದಿಸಬೇಕು ಎಂದು ಭಾವಿಸಿರುವ ಕೃತಿಗಳನ್ನು ಅವರು ಓದಿರಲಿಕ್ಕಿಲ್ಲ ಅಷ್ಟೆ. ಹಾಗೆ ನೋಡಿದರೆ ಸಾಹಿತ್ಯಕ್ಕೆ ಹತ್ತಿರುವಾಗಲು ನಮ್ಮ ತಲೆಮಾರಿಗಿಂತ ಈಚಿನವರಿಗೆ ಸಾಧ್ಯತೆಗಳು ಬಹಳಷ್ಟಿವೆ. ಆಡಿಯೊ, ವಿಡಿಯೊ, ಪಿಡಿಎಫ್ ಫಾರ್ಮ್ಯಾಟ್‌ಗಳಲ್ಲಿ ಅವರು ಸಾಹಿತ್ಯಕ್ಕೆ ಹತ್ತಿರವಿದ್ದೇ ಇದ್ದಾರೆ. ಪುಸ್ತಕ ಓದುತ್ತಿಲ್ಲ ಎನ್ನುವುದಕ್ಕೆ ಟೆಕ್ನಿಕಲ್ ಕಾರಣಗಳಿವೆ; ಸಾಹಿತ್ಯ ಓದುತ್ತಿಲ್ಲ ಎನ್ನುವುದಕ್ಕಲ್ಲ. ಕನ್ನಡ ನೆಲದಲ್ಲಿ ಮಕ್ಕಳ ಸಾಹಿತ್ಯಕ್ಕೆಂದೇ ಮೀಸಲಾದ ಒಂದು ಪ್ರಕಾಶನ ಸಂಸ್ಥೆಯೂ ಇಲ್ಲ. ಇರುವ 'ಎನ್‌ಬಿಟಿ' ಬೆಂಗಳೂರಿಗೆ ಸೀಮಿತವಾಗಿದೆ. ಈ ಸಂಬಂಧ ಚೆನ್ನೈ ಬಹಳ ಮುಂಚೂಣಿಯಲ್ಲಿದೆ. ಟುಲಿಕಾ, ತಾರಾ, ಸ್ಪೈಡರ್ ಮುಂತಾದ ಸಂಸ್ಥೆಗಳು



ಕೆ. ಶಿವಲಿಂಗಪ್ಪ ಹಂದಿಹಾಳು ಬಳ್ಳಾರಿ ಜಿಲ್ಲೆಯ ಹಂದಿಹಾಳು ಗ್ರಾಮದವರು. ತಮ್ಮೂರಿನ ಸ. ಹಿ. ಪ್ರಾ. ಶಾಲೆಯಲ್ಲಿ ಸಹ ಶಿಕ್ಷಕರು. 'ನಾನು ಮತ್ತು ಕನ್ನಡಕ' (ಕವನ ಸಂಕಲನ), 'ಶಾವೋಲಿನ್' (ಇಂಗ್ಲಿಷ್ ಮೂಲ ಮಕ್ಕಳ ಕತೆಗಳು), 'ಆನಂದಾವಲೋಕನ' (ಭಾರತೀಯ ಮಕ್ಕಳ ಸಾಹಿತ್ಯ ಕುರಿತ ಅಧ್ಯಯನ), 'ದಿ ಯಂಗ್ ಸೈಂಟಿಸ್ಟ್' (ಮಕ್ಕಳ ಕಾದಂಬರಿ) ಹಾಗೂ 'ನೋಟ್‌ಬುಕ್' (ಮಕ್ಕಳ ಕಥೆಗಳು) ಅವರ ಪ್ರಮುಖ ಕೃತಿಗಳು. ಜಿ.ಬಿ. ಹೊಂಬಳ ಮಕ್ಕಳ ಸಾಹಿತ್ಯ ಪ್ರಶಸ್ತಿ, ಆಜೂರು ಪ್ರತಿಷ್ಠಾನ ಪ್ರಶಸ್ತಿ, ಅಷ್ಟ ದಿಗ್ಗಜ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಭಾಜನರು.